## ನೇರ ಪ್ರಸಾರ

ಶ್ರವಣ ಬೆಳಗೊಳದಲ್ಲಿ 17–2–2018ಕ್ಕೆ ಮಹಾಮಸ್ತಕಾಭಿಷೇಕದ ಪ್ರಾರಂಭ ವೈಭವೋಪೇತವಾಗಿ ನಡೆಯಿತು. ಆರಂಭದ ಕಾರ್ಯಕ್ರಮಗಳ ನೇರ ಪ್ರಸಾರವನ್ನು ಯಾವ ಖಾಸಗಿ ವಾಹಿನಿಯವರೂ ಪ್ರಸಾರ ಮಾಡಲಿಲ್ಲ. ಆದರೆ ನೆಚ್ಚಿನ 'ಚಂದನ' ವಾಹಿನಿ ಈ ಎಲ್ಲ ಕಾರ್ಯಕ್ರಮಗಳನ್ನು ನೇರ ಪ್ರಸಾರದಲ್ಲಿ ದೇಶ–ವಿದೇಶಗಳ ವೀಕ್ಷಕರಿಗೆ ತೋರಿಸಿತು. ಪ್ರಸಾರ ಅತ್ಯಂತ ಸ್ಪಷ್ಟವಾಗಿ, ಜೀವಂತವಾಗಿ ಇತ್ತು! ಸ್ವತಃ ನನ್ನ ಕಣ್ಣೆದುರಿಗೇ ಮಹಾಮಸ್ತಕಾಭಿಷೇಕ ನಡೆಯುತ್ತಿರುವಂತಿತ್ತು, ಭೇಷ್ ಚಂದನ!

—ನಾರಾಯಣ ಯಾಜಿ, ಶಿರಾಲಿ

## ಮಾನವೀಯತೆ ಮೆರೆದ 'ಫ್ಯಾಮಿಲಿ'

ಕಲರ್ಸ್ ಕನ್ನಡ ವಾಹಿನಿಯಲ್ಲಿ ಪ್ರಸಾರವಾದ ಕಾರ್ಯಕ್ರಮ 'FAMILY ಪವರ್' ನಲ್ಲಿ ಒಂದು ಮನ ತುಂಬಿದ ಘಟನೆ. ಶಾಹೀನಾ ಫ್ಯಾಮಿಲಿಯವರು ತಾವು ಗೆದ್ದ ಬಹುಮಾನದ ಅಷ್ಟೂ ಮೊತ್ತ ಮೂರು ಲಕ್ಷ ರೂಪಾಯಿಯನ್ನು ಸ್ಪರ್ಧೆಯಿಂದ ನಿರ್ಗಮಿಸಿದ್ದ ಲೋಕಮ್ಮ ಫ್ಯಾಮಿಲಿಯ, ಹೇಮಾ ಅವರ 6 ವರ್ಷದ ದೃಷ್ಟಿಹೀನ ಮಗು ದೀಕ್ಷಿತಾಳ ಕಣ್ಣಿನ ಚಿಕಿತ್ಸೆಗೆ ಆ ಕಾರ್ಯಕ್ರಮದಲ್ಲಿಯೇ ಕೊಟ್ಟಿದ್ದು ನೋಡಿ ಮನ ಕಲಕಿತು.

ಇಲ್ಲಿ ಅವರು ನೀಡಿದ ಸಂದೇಶ ಹಲವು. ಮುಸ್ಲಿಂ ಕುಟುಂಬದ ತ್ಯಾಗ, ಕೋಮು ಗಲಭೆಗಳಿಂದ ಕಚ್ಚಾಡುತ್ತಿರುವವರಿಗೆ ನೀಡಿದ ಸೌಹಾರ್ದತೆಯ ಮಾನವೀಯ ಸಂದೇಶ. ಕಾಮಿಡಿ ಹೆಸರಿನಲ್ಲಿ ಮತ್ತೇನೋ ಬಿತ್ತರಿಸುವ, ಧಾರಾವಾಹಿ ಹೆಸರಿನಲ್ಲಿ ಕ್ರೌರ್ಯ ಮೆರೆಯುವ, ಸಂವಾದಗಳ ಹೆಸರಿನಲ್ಲಿ ಹೊಡೆದಾಡುವ ಕಾರ್ಯಕ್ರಮಗಳಿಗಿಂತ ಎಷ್ಟೋ ಮೇಲೆನಿಸಿತು.

ದಿನವಿಡೀ ಸಮಾಜದಲ್ಲಿ ಕೋಮು ಗಲಭೆ ಪ್ರಚೋದಿಸುವ ವಿಷಯಗಳ ಕುರಿತು ಅನವಶ್ಯಕವಾಗಿ ಚರ್ಚೆ ಮಾಡುವ ಕನ್ನಡ ಚಾನೆಲ್‌ಗಳಿಗೆ ಮಾನವೀಯತೆ ಮೆರೆದು ಸಮಾಜದ ಸಾಮರಸ್ಯ ಕೈಗನ್ನಡಿಯಾದ ಶಾಹೀನಾ ಕುಟುಂಬದ ವಿಷಯವಾಗಿ ಸಮಾಜಕ್ಕೆ ಒಂದು ಒಳ್ಳೆಯ ಸಂದೇಶ ಸಾರುವ ಉಪಯುಕ್ತ ಚರ್ಚೆ ಮಾಡದೇ ಇರುವುದು ವಿಷಾದಕರ.

ಈ ಕಾರ್ಯಕ್ರಮವನ್ನು ಅಚ್ಚುಕಟ್ಟಾಗಿ ನಿರ್ವಹಿಸುತ್ತಿರುವ ಪವರ್ ಸ್ಟಾರ್ ಪುನೀತ್ ರಾಜ್‌ಕುಮಾರ್‌ರವರು ಅಭಿನಂದನಾರ್ಹರು.

—ಸುಂದರ್, ಬೆಂಗಳೂರು; ಪ್ರಕಾಶ.ಎಸ್.ಮನ್ನಂಗಿ, ಮೋಟೇಬೆನ್ನೂರು;
ಮೌಲಾಲಿ ಕೆ ಬೋರಗಿ ಸಿಂದಗಿ; ಕೆ.ಶ್ರೀನಿವಾಸರಾವ್, ಹರಪನಹಳ್ಳಿ

ವಾರದ ಪತ್ರ

## ಕಥೆ - ಕಾದಂಬರಿ ಇಲ್ಲವೆ?

ಕನ್ನಡದ ಕಿರುತೆರೆಯ ಧಾರಾವಾಹಿಗಳ ಗುಣಮಟ್ಟ ಬಹಳಷ್ಟು ಕುಸಿಯುತ್ತಿರುವುದನ್ನು ಕಾಣಬಹುದಾಗಿದೆ. ಉತ್ತಮ ಸಂದೇಶವನ್ನು ಸಮಾಜಕ್ಕೆ ತಲುಪಿಸುವ ಸದಾಶಯದಿಂದ ಇವು ಪ್ರಾರಂಭಗೊಂಡರೂ, ಇವುಗಳ ಅಸಹಜ ಬೆಳವಣಿಗೆಯಲ್ಲಿ ನೈಜತೆಯನ್ನೇ ಉದ್ದೀಪಿಸುತ್ತಾ ಹೋಗುತ್ತಿರುವುದು ಕಾಣುತ್ತಿದೆ.

ಧಾರಾವಾಹಿಗಳನ್ನು ಮುಂದೆ ಬೆಳೆಸಿಕೊಂಡು ಹೋಗಲು ನಮ್ಮ ನಿರ್ದೇಶಕರಿಗೆ ಸುಲಭವಾಗಿ ಲಭ್ಯವಾಗಿರುವ ತಂತ್ರ 'ಕಿಡ್ನಾಪ್'. ಇಂಥದ್ದೊಂದು ಪ್ರಸಂಗವಿಲ್ಲದೆ ನಮ್ಮ ಧಾರಾವಾಹಿಗಳ ಕಥೆಗಳು ಬೆಳೆಯುವುದೇ ಇಲ್ಲ. ಇದಕ್ಕೆ ಸಾಕಷ್ಟು ನಿದರ್ಶನಗಳಿವೆ. 'ಕಿಡ್ನಾಪ್' ನಂಥ ವಾಮ ಮಾರ್ಗವನ್ನು ಅವುಗಳ ವಿಭಿನ್ನ ಬಗೆಗಳಲ್ಲಿ ವೈಭವೀಕರಿಸುತ್ತಾ ಹೋಗುವುದು ಅಸಹ್ಯ ಹುಟ್ಟಿಸುತ್ತಿದೆ. ನಿಜ ಜೀವನದಲ್ಲೂ ದುಷ್ಟರು ಇಂತಹ ದೃಶ್ಯ ಸಾಧ್ಯತೆಗಳನ್ನು ಎರವಲು ಪಡೆದು, ತಮ್ಮ ಸ್ವಾರ್ಥ ಸಾಧನೆಗೆ ದುರುಪಯೋಗ ಮಾಡಿಕೊಳ್ಳುವ ಸಾಧ್ಯತೆ ಹೆಚ್ಚಾಗಿದೆ. ಹಾಗಾಗಿ ಧಾರಾವಾಹಿಗಳಲ್ಲಿ 'ಕಿಡ್ನಾಪ್' ತಂತ್ರವನ್ನು ನಿಲ್ಲಿಸಿ ಆರೋಗ್ಯಕರವಾದ ಸಮಾಜ ಬೆಳೆಯಲು ಅವಕಾಶ ಮಾಡಿಕೊಡಿ. ವೈವಿಧ್ಯಮಯ ಕಥಾ ವಸ್ತುವಿಗೆ ಕನ್ನಡ ಸಾಹಿತ್ಯದ ಕಾದಂಬರಿ ಮತ್ತು ಕಥಾ ಪ್ರಪಂಚವೇ ಸಾಗರೋಪಾದಿಯಲ್ಲಿ ಹರಡಿ ಹಬ್ಬಿದೆ.

—ಡಿ. ದೊಡ್ಡಲಿಂಗೇಗೌಡ, ಕೊಳ್ಳೇಗಾಲ

## ಸ್ಟೀರಿಯೋ ಟೈಪ್

ಕನ್ನಡ ಯಾವುದೇ ವಾಹಿನಿಯ ಯಾವುದೇ ಧಾರಾವಾಹಿ ತೆಗೆದುಕೊಳ್ಳಿ ತೆರೆಯ ಮೇಲೆ ಮೂರಕ್ಕಿಂತ ಹೆಚ್ಚು ಮಹಿಳಾ ಪಾತ್ರಧಾರಿಗಳು ಕಾಣಿಸಿಕೊಂಡರೆ ಇಬ್ಬರು ಅತ್ಯಂತ ಮುಗ್ಧ, ದೇವರನ್ನು ನಂಬುವಂತಹವರು ಇರುತ್ತಾರೆ. ಉಳಿದವರು ಪಕ್ಕಾ ಕುತಂತ್ರಿ ಕಪಟಿಗಳಾಗಿರುತ್ತಾರೆ. ಕಥೆ ಸಾಮಾಜಿಕವಾಗಿದ್ದರೆ ಅವರ ಕೈಯಲ್ಲಿ ಖಂಡಿತ ಮೊಬೈಲ್ ಫೋನ್ ರಾಜಾಜಿಸುತ್ತಿರುತ್ತದೆ.

—ಮುಕುಂದ ಹೆರಕಲ್ಲ, ಕಲಬುರ್ಗಿ

## ಮಕ್ಕಳ ಮನಸ್ಸಿಗೆ ನೋವು

ಝೀ ಕನ್ನಡ ವಾಹಿನಿಯ 'ಸಾರೆಗಮ ಲಿಟ್ಲ್ ಚಾಂಪ್' ಕಾರ್ಯಕ್ರಮದಲ್ಲಿ ಹಂಸಲೇಖರವರು ಉತ್ತಮವಾಗಿ ಹಾಡಿದ ಮಕ್ಕಳಿಗೆ ಗೋಲ್ಡನ್ ಬಜರ್ ಒತ್ತುವುದು ಆ ಮಕ್ಕಳಿಗೆ ಉತ್ತೇಜನ ನೀಡುವುದಕ್ಕೆ ಎನ್ನುತ್ತಾರೆ. ಆದರೆ ಗೋಲ್ಡನ್ ಬಜರ್ ಸಿಗದಿದ್ದ ಮಕ್ಕಳ ಮನಃಸ್ಥಿತಿಯ ಬಗ್ಗೆಯೂ ಸ್ವಲ್ಪ ಯೋಚಿಸಿದರೆ ಒಳಿತಲ್ಲವೇ? ಎಲ್ಲರೂ ಗೆಲ್ಲಲಾಗದಿರುವುದು ಸಾರ್ವತ್ರಿಕ ಸತ್ಯ. ಆದರೆ ಫಲಿತಾಂಶ ರಹಸ್ಯವಾಗಿದ್ದು ಕೊನೆಯಲ್ಲಿ ಪ್ರಕಟವಾದರೆ ಮಕ್ಕಳಿಗೆ ಏನೂ ಅನಿಸುವುದಿಲ್ಲ. ಆದರೆ ಸ್ಪರ್ಧೆ ನಡೆಯುತ್ತಿದ್ದು, ಇನ್ನೂ ಹಲವು ಸುತ್ತುಗಳಿರುವಾಗಲೇ ಉತ್ತಮ ಗಾಯಕರಿಗೆ ಗೋಲ್ಡನ್ ಬಜರ್ ಒತ್ತುವುದನ್ನು ನಿಲ್ಲಿಸಿದರೆ (ಬದಲಾಗಿ ಹಂಸಲೇಖ ಸರ್ ರಹಸ್ಯ ಅಂಕ ಕೊಟ್ಟಿರಲಿ), ಯಾವ ಮಕ್ಕಳ ಮನಸ್ಸಿಗೂ ನೋವಾಗುವುದಿಲ್ಲ.

—ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ

## ಬದುಕಿಸಲು ಬಿಸ್ಲೇರಿ ನೀರು!

ಕನ್ನಡ ಕಲರ್ಸ್ ವಾಹಿನಿಯಲ್ಲಿ 'ಅಗ್ನಿಸಾಕ್ಷಿ'ಯಲ್ಲಿ ಕಿಶೋರ್ ಸನ್ನಿಧಿಯನ್ನು ಗುಂಡಿಯಲ್ಲಿ ಹಾಕಿ ಮಣ್ಣು ಮುಚ್ಚಿರುತ್ತಾನೆ. ಆಗ ಪೊಲೀಸಿನವರು, ಸಿದ್ಧಾರ್ಥ್ ಹಾಗೂ ತಮ್ಮ, ಗೆಳೆಯ ಎಲ್ಲಾ ಸೇರಿ ಮಣ್ಣಿನಿಂದ ಆಚೆ ತೆಗೆದು ಅಲ್ಲಿಯೆ ಇದ್ದ ಒಂದು ಕೊಳದ ಅಥವಾ ಕೆರೆ ಇರಬಹುದು, ಕಟ್ಟೆಯ ಮೇಲೆ ಮಲಗಿಸುತ್ತಾರೆ. ಮುಖಕ್ಕೆ ನೀರು ಹಾಕಲು ಅಲ್ಲಿರುವ ನೀರನ್ನು ಮರೆತು ಗೆಳೆಯ ದೂರದಲ್ಲಿರುವ ಕಾರಿನಿಂದ ಬಿಸ್ಲೇರಿ ನೀರನ್ನು ತರುತ್ತಾನೆ.. ಆದರೆ ಮಣ್ಣಿನಿಂದ ಹೊರಗೆ ತೆಗೆದ ತಕ್ಷಣ, ಅಲ್ಲಿಯೆ ಇದ್ದ ನೀರನ್ನು ಮುಖಕ್ಕೆ ಚಿಮುಕಿಸಬಹುದಾಗಿತ್ತು ಅಲ್ಲವೆ? ಪೊಲೀಸ್‌ನವರು ಸಹಾಯ ಮಾಡುವುದನ್ನು ಬಿಟ್ಟು ಕೈನಲ್ಲಿ ಗನ್ ಹಿಡಿದು ಸನ್ನಿಧಿಯ ಮುಖಕ್ಕೆ ನೀರು ಹಾಕುವ ತನಕ ಶೂಟ್ ಮಾಡುವ ಭಂಗಿಯಲ್ಲೇ ಇರುತ್ತಾರೆ. ಇದು ಮೂರ್ಖತನದ ಪರಮಾವಧಿ ಎಂದರೆ ತಪ್ಪಾಗಲಾರದು. ಧಾರಾವಾಹಿಯೇ ಇರಬಹುದು ಆದರೆ ನೈಜತೆ ಬೇಡವೆ? ನಿರ್ದೇಶಕ ಮಹಾಶಯನಿಗೆ ಏನು ಹೇಳಬೇಕು!

—ಎನ್.ಎಸ್. ಚಂದ್ರಶೇಖರ್, ಬೆಂಗಳೂರು

## ಅತಿಯಾದರೆ ಅಮೃತವೂ ವಿಷ

ಚಂದನ ವಾಹಿನಿಯಲ್ಲಿ 'ಅಂತರಾಳ' ಕಾರ್ಯಕ್ರಮ ಪ್ರಸಾರವಾಗುತ್ತಿದ್ದು, ಇದನ್ನು ನೋಡಲು ಹೋದರೆ ಜಾಹೀರಾತುಗಳ ಹಾವಳಿ. ನಿಮಿಷಕ್ಕೊಮ್ಮೆ ಜಾಹೀರಾತು ನೋಡಬೇಕಾಗುತ್ತದೆ. ಅತಿಯಾದರೆ ಅಮೃತವೂ ವಿಷವಲ್ಲವೇ?

— ತೂರಗಲ್ಲ ಉಮೇಶ, ರಾಮದುರ್ಗ